SPL.C.SC/ST No.23/2024
P.W.-4
C.W.-6

# 1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ, (ಗಂಗಾವತಿ ಆಸೀನ)

## SPL.C.SC/ST No.23/2024

ಇಂದು ದಿನಾಂಕ- **30.06.2026** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯದ ಸಾಕ್ಷಿ ಕಟ್ಟೆಯಲ್ಲಿ ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು- | ಸಣ್ಣ ದ್ಯಾವಮ್ಮ |
| ಗಂಡನ ಹೆಸರು- | ಕುಷ್ಟಗಿ ಅಡವೆಪ್ಪ |
| ವಯಸ್ಸು- | 50 ವರ್ಷ |
| ಉದ್ಯೋಗ- | ಗೃಹಿಣಿ |
| ವಾಸಸ್ಥಳ- | ಉಂಬಳಿ ಕಾಟಾಪುರ, ಕನಕಗಿರಿ ತಾಲೂಕು |

**ಮುಖ್ಯ ವಿಚಾರಣೆ - ಪ್ರಾಜ್ಞ ಸರ್ಕಾರಿ ಅಭಿಯೋಜಕರಿಂದ -**

1. ಚಾಸಾ-7 ರವರು ನನ್ನ ಮಗ. ಚಾಸಾ-1 ರವರು ನನ್ನ ಸೊಸೆ ಹಾಗೂ ಚಾಸಾ-7 ರವರ ಹೆಂಡತಿ. ನ್ಯಾಯಾಲಯದ ಮುಂದಿರುವ 1 ನೇ ಆರೋಪಿ ನನ್ನ ತಮ್ಮ. ನ್ಯಾಯಾಲಯದ ಮುಂದಿರುವ 2 ನೇ ಆರೋಪಿ ನನ್ನ ತಮ್ಮನ ಹೆಂಡತಿ. ನ್ಯಾಯಾಲಯದ ಮುಂದಿರುವ 3 ನೇ ಆರೋಪಿಯು 1 ಮತ್ತು 2 ನೇ ಆರೋಪಿತರ ಮಗ. ಸುಮಾರು 30-40 ವರ್ಷಗಳ ಹಿಂದೆ ನನ್ನ ಮದುವೆ ವಾಲ್ಮೀಕಿ ಜನಾಂಗದ ಅಡಿವೆಪ್ಪನ ಜೊತೆ ಆಗಿತ್ತು. ಲಚಮವ್ವ ಎನ್ನುವವರು ನನ್ನ ತಾಯಿ. ನನ್ನ ತಾಯಿ ನನಗೆ 5 ಎಕರೆ 25 ಗುಂಟೆ ಜಮೀನನ್ನು ದಾನಪತ್ರದ ಮೂಲಕ ಕೊಟ್ಟಿದ್ದರು. ನಾನು

ಅಡಿವೆಪ್ಪನನ್ನು ಮದುವೆಯಾಗಿದ್ದು 1 ನೇ ಆರೋಪಿಗೆ ಇಷ್ಟವಿರಲಿಲ್ಲ. ಆದ್ದರಿಂದ 1 ನೇ ಆರೋಪಿ ನನ್ನ ತಾಯಿಯ ಹಣ ಇದೆ ಎಂದು ಹೇಳಿ ನನ್ನ ಸಹಿಯನ್ನು ಮಾಡಿಸಿಕೊಂಡು ನನ್ನ ಹೊಲವನ್ನು ತನ್ನ ಹೆಸರಿಗೆ ಮಾಡಿಸಿಕೊಂಡಿರುತ್ತಾರೆ. ಆ ವಿಚಾರ ನನಗೆ ತಿಳಿದು ನಾನು 1 ನೇ ಆರೋಪಿಯ ವಿರುದ್ಧ ಕನಕಗಿರಿ ನ್ಯಾಯಾಲಯದಲ್ಲಿ ಕೇಸು ಹಾಕಿದ್ದೆನು. ಅಂದಿನಿಂದ ನನ್ನ ಹಾಗೂ 1 ನೇ ಆರೋಪಿಯ ಸಂಬಂಧ ಸರಿ ಇರಲಿಲ್ಲ. ನಾನು ಚಾಸಾ-1 ಮತ್ತು 7 ರವರ ಜೊತೆ ಉಂಬಳಿ ಕಾಟಾಪುರದಲ್ಲಿ ಹೊಲದ ಜಮೀನಿನಲ್ಲಿ ವಾಸವಿದ್ದೇನೆ. ಸುಮಾರು 8-9 ವರ್ಷಗಳ ಹಿಂದೆ ಒಂದು ದಿನ ಚಾಸಾ-1 ರವರು ಮುರಳಿಯವರ ಹೊಲಕ್ಕೆ ಕೆಲಸಕ್ಕೆ ಹೋಗಿದ್ದರು. ಆ ದಿನ ಸಂಜೆ 05.00 ಗಂಟೆಗೆ ಕೆಲಸ ಮುಗಿಸಿ ಮನೆಗೆ ಆಕೆ ವಾಪಸ್ಸು ಬರುತ್ತಿದ್ದಾಗ ನ್ಯಾಯಾಲಯದ ಮುಂದಿರುವ ಆರೋಪಿತರು ಅವರ ಮೇಲೆ ಹಾಕಿದ್ದ ಕೇಸನ್ನು ವಾಪಸ್ಸು ತೆಗೆದುಕೋ ಎಂದು ಹೇಳಿ ಆಕೆಗೆ ಬಡಿದರು ಎಂದು ನನಗೆ ಚಾಸಾ-2 ರಿಂದ 5 ರವರು ಹೇಳಿದರು. ನಾನು ಪೊಲೀಸರ ಬಳಿ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿಯನ್ನು ನುಡಿಯುತ್ತಿರುವ ಕಾರಣ ಪ್ರಾಜ್ಞ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೇಳಿದ್ದು ಸಾಕ್ಷಿಯ ಸಾಕ್ಷ್ಯವನ್ನು ಪರಿಗಣಿಸಿ ಸಾಕ್ಷಿಯು ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿರುವ ಕಾರಣ ಕೋರಿಕೆಯ ಮೇರೆಗೆ ಅನುಮತಿ ನೀಡಲಾಯಿತು.)

**ಪಾಟೀಸವಾಲು - ಪ್ರಾಜ್ಞ ಸರ್ಕಾರಿ ಅಭಿಯೋಜಕರಿಂದ -**

2. ಆ ದಿನ ಚಾಸಾ-1 ರವರಿಗೆ ಆರೋಪಿತರು ಲೇ ನಾಯಕ ಸೂಳೆ ನಿನ್ನ ಗಂಡ ಮತ್ತು ನಿನ್ನ ಅತ್ತೆ ಇಬ್ಬರೂ ಕೂಡಿ ನಮ್ಮ ವಿರುದ್ಧ ನ್ಯಾಯಾಲಯದಲ್ಲಿ ಕೇಸು ಹಾಕಿದ್ದಾರೆ ನೀನು ನಿನ್ನ ಗಂಡನಿಗೆ ಹೇಳಿ ಕೇಸನ್ನು ವಾಪಸ್ಸು ತೆಗೆದುಕೊಳ್ಳಲಿಕ್ಕೆ ಹೇಳು ಇಲ್ಲದಿದ್ದರೆ ನಿನ್ನ ಗಂಡನನ್ನು ಜೀವಂತವಾಗಿ ನನ್ನಲ್ಲಿರುವ ಬಂದೂಕಿನಿಂದ ಸುಟ್ಟು ಹಾಕುತ್ತೇನೆ ಎಂದು ಅವಾಚ್ಯ ಬೈದು ಜಾತಿ ನಿಂದನೆ ಮಾಡಿದರು ಎಂದು ನನಗೆ ಚಾಸಾ-1 ರವರು ಹೇಳಿದರು ಎಂದರೆ ಸರಿ.

**<u>ಪಾಟೀಸವಾಲು - ಆರೋಪಿತರ ಪರ ವಕೀಲರಿಂದ</u> -**

3. ಆರೋಪಿತರ ಪರ ವಕೀಲರು ಕಾಲಾವಕಾಶ ಕೇಳಿದ್ದು ಸಕಾರಣ ಇರುವುದಿಲ್ಲ. ಆದ್ದರಿಂದ ಪಾಟೀಸವಾಲು ಇಲ್ಲವೆಂದು ಪರಿಗಣಿಸಲಾಯಿತು.

**<u>ಮರು ವಿಚಾರಣೆ - ಇಲ್ಲ</u>.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಗಣಕಯಂತ್ರದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಗಿದೆ.)

ಓ. ಹೇ. ಕೇ. ಸರಿ ಇದೆ.

(**ವೇದಮೂರ್ತಿ ಬಿ.ಎಸ್.**)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಪ್ಪಳ (ಗಂಗಾವತಿ ಆಸೀನ).